Golden Resrach Thoughts
Vol -3 , ISSUE –V, Jan - 2014
ISSN No-2031-5063
Available online at www.aygrt.isrj.org

ORIGINAL ARTICLE

# ನೇಮಿಚಂದ್ರರ 'ಪೆರುವಿನ ಪವಿತ್ರ ಕಣಿವೆಯಲ್ಲಿ' ಒಂದು ವಿಮರ್ಶೆ

**ಶಿವಗಂಗಾ U. ಬಿಲಗುಂದಿ**

ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**

ದೇಶ ವಿದೇಶಗಳ ಸಂಬಂಧದ ಸಂಕಥನ ಇದೊಂದು ಪ್ರವಾಸ ಕಥನ. 'ಪೆರು ದೇಶದ ಜನಾಂಗದ ಒಂದು ಸಂಸ್ಕೃತಿಯನ್ನು ಬಿಚ್ಚಿಡುವ ಕೃತಿ. ಅವರ ಭಾಷೆ, ವೇಷಭೂಷಣ, ಅವರ ಮುಗ್ಧತೆಯನ್ನು ವಿಶ್ಲೇಷಿಸುವ ಪ್ರಯತ್ನ ಇಲ್ಲಿದೆ. ಲೇಖಕಿಯ ಶ್ರಮ ತಾಳ್ಮೆಗುಣಗಳು ಎದ್ದು ಕಾಣುತ್ತೇವೆ. ಭಾರತದಿಂದ ಪ್ರವಾಸ ಕೈಗೊಂಡ ದೇಶವಿದೇಶಗಳ ಜನ ಪರಿಸರ, ಭಾಷೆ ರೀತಿ–ನೀತಿ ಸಂಪ್ರದಾಯ ಆಚರಣೆ ಅಲ್ಲಿನ ಇತಿಹಾಸವನ್ನು ತಿಳಿಸುವ ದೃಷ್ಟಿಕೋನದ ಪ್ರಮಾಣಿಕ ಪ್ರಯತ್ನ ಈ ಕೃತಿಯಲ್ಲಿ ಮಾಡಲಾಗಿದೆ.

'ಪೆರುವಿನ ಪವಿತ್ರ ಕಣಿವೆಯಲ್ಲಿ' ಇಪ್ಪತ್ತೊಂದು ಭಾಗಗಳಾಗಿ ವಿಂಗಡಿಸಿ, ಪೆರುವಿನ ಸಮಸ್ತ ಇತಿಹಾಸವನು ಕಟ್ಟಿಕೊಡುವ ಪ್ರಮಾಣಿಕ ಪ್ರಯತ್ನ ಮಾಡಿದ್ದಾರೆ. 'ಪೆರುವಿನತ್ತ ಪಯಣ, ಉತ್ಖನನದ ನೆಲದಲ್ಲಿ, ಪೆರುವಿನ ನೆಲದಲ್ಲಿ ಚುನಾವಾಣಿ, ಪೆರುವಿನ ನೆಲದ ಮಹಿಳಾ ಹೋರಾಟ, ಮರುಭೂಮಿಯ ನಗರ ನಾಸ್ಕಾ, ಚೌಚೀಲಾ, ಸಮಾದಿಗಳ ನಡುವೆ, ಮರಭೂಮಿಯ ದೈತ್ಯ ಚಿತ್ರಗಳು, ನಾಸ್ಕಾಗೆರೆಗಳ ಮೇಲೆ, ಜ್ವಾಲಾಮುಖಿಯ ನಡುವೆ, ಇನ್ಕಾಸಾಮ್ರಾಜ್ಯದ ನಾಭಿಕೇಂದ್ರ– ಕುಸ್ಕೋ, ಜಲಾಂತಾಯ್ ತೊಂಬೋದ ಸೂರ್ಯ ದೇವಾಲಯ, ರಕ್ತದಲ್ಲಿ ಬರೆದ ಚರಿತ್ರೆ, ಮಾಚುಪಿಚುವಿನ ಎತ್ತರದಲ್ಲಿ, ಕಳೆದುಹೊದ ಇನ್ಕಾನಗರಿ, ಅಮೆಜಾನ್ ತಟದತ್ತ, ಅಮೆಜಾನ್ ಮಹಾನದಿಯ ಮೇಲೆ, ಬ್ರಜಿಲ್ ನೆಲದಲ್ಲಿ, ಪೆರುವಿಗೆ ಮರುಪ್ರವೇಶ ಅಮೆಜಾನ್ ಕಾಡಿನಲ್ಲಿ ವಿಕ್ಟೋರಿಯಾ ಅಮೇಜಾನಿಕಾ, ಹೋಗಿಬರುವೆ ಪೇರು – ಹೀಗೆ ೨೧ ಅಧ್ಯಾಯಗಳನ್ನು ಮಾಡಿಕೊಂಡು ತಮ್ಮ ಪ್ರವಾಸ ಕಥನವನ್ನು ಮುಗಿಸುತ್ತಾರೆ.

ಪೆರುವಿನತ್ತ ಪಯಣ, ಇಲ್ಲಿ ಪೆರುವಿನ ಕುರಿತು ಲೇಖಕರೆ ಹೇಳುವಂತೆ "ಅಮೇರಿಕದ ಕೊಳ್ಳುಬಾಕತನವನ್ನು 'ಪ್ರತಿಕ್ಷಣವನ್ನು ಹಣ'ವಾಗಿ ಬದಲಿಸುವ ಬದುಕಿನ ಪ್ರರಿಯನ್ನು 'ಬಳಸು ಬಿಸಾಕು' ಸಂಸ್ಕೃತಿಯ ಅತಿರೇಕವನ್ನು ಕಂಡು ಪೆರುವಿಗೆ ಹೋದಾಗ ಕಂಡದ್ದು ವಿಪರೀತದ ವೈದೃಶ್ಯ ಪೆರು ಒಂದು ಬಡದೇಶದ ಹೃದಯ ಸ್ಪರ್ಶಿ ಅನುಭವವನ್ನು ನೀಡಿತು. ಒಂದು ಪುರಾತನ ಸಂಸ್ಕೃತಿಯ ಪವಿತ್ರ ನೆಲವನ್ನು ಮಾಡಿದ ತೃಪ್ತಿ"[೧] ಎನ್ನುತ್ತಾರೆ. ಭಾರತದಿಂದ ಅಮೇರಿಕಾ ದಿಂದ ಅಮೇರಿಕಾದ ಸ್ಯಾನಪ್ರಾನಿಸಿಸ್ಕೋ ದಿಂದ ಪೆರುವಿಗೆ ಪಯಣ. ಪೆರುವಿನ ರಾಜಧಾನಿ ಲಿಮಾದ ವಿಮಾನ ನಿಲ್ದಾಣದಲ್ಲಿ ಇಳಿದುಕೊಂಡ ಅವರ ಅನುಭವ "ಕತ್ತಲ ಸೆರಗದಲಿ ಮಿನುಗಿದ ಹಣತೆಗಳಂತೆ ಕಂಡ ದೀಪಗಳು ವಿಮಾನದಿಂದ ಕಾಣುವ ಈ ದೃಶ್ಯವೇ ಒಂದು ಸ್ಥಳದ ಸಿರಿತನ, ಬಡತನಗಳ ಕತೆಯನ್ನು ಕೂಗಿ ಹೇಳುತ್ತದೆ. ಇದೀಗ ದಕ್ಷಿಣ ಅಮೇರಿಕ ಖಂಡದ ಪೆರುವಿನಲ್ಲಿ ಕಾಲಿಡುತ್ತಿದ್ದೆ ಮೈಲ್ಲಿ ಎಂತಹ ರೋಮಾಂಚನ ಪುರಾತನ ಸಂಸ್ಕೃತಿಯ ನೆಲಕ್ಕೆ ಆಗಮಿಸಿದ್ದೆ ಸಾವಿರ ಸಾವಿರ ದರ್ಪಣಗಳ ವೈಭವದ ವರ್ಣ ರಂಜಿತ ಇತಿಹಾಸದ ನೆಲಕ್ಕೆ ನಾಗರಿಕತೆಯ ತೊಟ್ಟಿಲು ತೂಗಿದ ಸ್ಥಳಕ್ಕೆ ಬಂದಿಳಿದಿದ್ದೆವು. ಅಮೇರಿಕದಂತೆ ಎಲ್ಲಿಂದಲ್ಲೋ ವಲಸೆ ಬಂದು ಸ್ಥಳಿಯರನ್ನೆಲ್ಲ ಬಡಿದು ಮುಗಿಸಿ ರಾತ್ರೊರಾತ್ರಿ ಏರಿನಿಂತು ಬೇರಿಲ್ಲದೆ ಬೆಳೆದ ಸಂಸ್ಕೃತಿಯಲ್ಲ. ಈ ನೆಲದಲಿ ಸಾವಿರಾರು ವರ್ಷಗಳ ಚರಿತ್ರೆಯಿತ್ತು ಅತ್ಯಂತ ಪುರಾತನ ಆಂಡೀಸ್ ಬೆಟ್ಟಗಳ ಕಠಿಣ ನೆಲದಲ್ಲಿ ಜೀವಂತವಿದ್ದ ಜನಜೀವನವಿತ್ತು"[೨] ಪೆರುವಿನ ಒಂದು ನೈಜ ಪರಿಸರ ಚಿತ್ರ ಕಣ್ಣಿಗೆ ಕಾಣುತ್ತಿತ್ತು.

ಉತ್ಖನನದ ನೆಲದಲ್ಲಿ "ಪೆರುವಿನ ಉದ್ದಕ್ಕೂ ಉತ್ತರದಿಂದ ದಕ್ಷಿಣಕ್ಕೆ ಆಂಡೀಸ್ ಪರ್ವತ ಶ್ರೇಣಿ ಹರಡಿಕೊಂಡಿದೆ. ಪಶ್ಚಿಮದಿಂದ ಪೂರ್ವಕ್ಕೆ ಹಾಯುತ್ತಿದ್ದಂತೆ ಹಿಮತುಂಬಿದ ಪರ್ವತ ಶಿಖರಗಳು ಅವುಗಳಲ್ಲಿ ಅವೆಷ್ಟೊ ಜ್ವಾಲಾಮುಖಿಗಳು ಕಠಿಣವಾದ ಭೂಭಾಗ, ಮರುಳುಗಾಡು, ನಂತರ ಪೂರ್ವಕ್ಕೆ ಟ್ರಾಫಿಕಲ್ ಮಳೆಕಾಡು ಆಂಡೀಸ್ ಪರ್ವತಗಳನ್ನು, ಕಣಿವೆಗಳನ್ನು, ಮರುಭೂಮಿಯನ್ನು ಉಷ್ಣವಲಯದ ಮಳೆಕಾಡು ಎಲ್ಲವನ್ನು ನೋಡುವ ಹಂಬಲ, ಸುಮಾರು ಎರಡು ಕೋಟಿ ಜನಸಂಖ್ಯೆಯ ನೆಲವಿದು ಯೂರೋಪಿನಿಂದ ಶತಮಾನಗಳ ಹಿಮದೆ ಬಂಧು ಇಲ್ಲಿನ ನೆಲೆಸಿದ ಸ್ಥಾನಿಕರು ಈ ನೆಲದಲ್ಲಿ ಬೆರತು ಇಲ್ಲಿಯವರೇ ಆಗಿ ಹೋಗಿದ್ದಾರೆ. ಪೆರುವಿನ ತುಂಬಾ ನಮಗೆ ಕೇಳುವುದು ಸ್ಪಾನಿಷ್ ಭಾಷೆಯೇ ಜನಸಂಖ್ಯೆಯ ಅರ್ಧಭಾಗ ಸ್ಪೇನಿನ ಮೂಲದವರೆ ನಗರಗಳನ್ನು ಬಿಟ್ಟು ಹಳ್ಳಿಗಳಿಗೆ, ಕಣಿವೆಗಳಿಗೆ ಇಳಿದರಷ್ಟೆ ಸ್ಥಳಿಯರ ವೇಷಭೂಷಣ ಜೀವನ ಕ್ರಮ ಮತ್ತು ಅವರ ಕೆಚುವಾ ಭಾಷೆ ಕೇಳಿಬರುವುದು"[೩] ಅಲ್ಲಿನ ಭಾಷೆ ಜನರ ಸಂಸ್ಕೃತಿಯ ಬಗ್ಗೆ ಮಾರ್ಮಿಕವಾಗಿ ತಿಳಿಸುತ್ತಾರೆ.

“ಪೆರುವಿನ ಜನರ ಬದುಕು ದುರ್ಬರವಿತ್ತು ಪೆರು ೨೨ ಮಿಲಿಯನ್ ಜನಸಂಖ್ಯೆಯ ದೇಶ ೧೫ ಮಿಲಿಯನ್ ಜನ ಬಡತನದ ರೇಖೆಯಡಿಯಲ್ಲಿದ್ದಾರೆ. ಈ ಜನರಲ್ಲಿ ಶೇ ೫೦ರಷ್ಟು ಹಸಿವಿನ ಹಪಹಪಿಯಲ್ಲಿದ್ದಾರೆ. ಹೀಗದ್ದೂ ಅಮೇರಿಕ ಪೆರುವಿನ ಮಾನವ ಹಕ್ಕುಗಳ ದಾಖಲೆ ಸುಧಾರಿಸಿದೆ. ಎಂದು ಸಾರಿತ್ತು. ಪ್ಯುಜಿರಿಯಾ ಆಡಳಿತ ಕಾಲದಲ್ಲಿ ಪೆರುವಿನ ರಕ್ತಸಿಕ್ತ ರಾಜಕೀಯ ಅಧ್ಯಾಯ ಬರೆಯಲ್ಪಟ್ಟಿತ್ತು. ಮಿಲಿಟಿರಿ ಸರ್ವಾಧಿಕಾರ ಸಮೂಹಬಂಧನ, ಹಿಂಸೆ ಕೊಲೆ ಸಾಮಾನ್ಯವಾಗದಿದವು”[೪] ಅಲ್ಲಿನ ಪುರಾತನ ಇತಿಹಾಸದಿಂದ ಹಿಡಿದು ಇಂದಿನ ಆಧುನಿಕ ಜಗತ್ತಿನ ಇತಿಹಾಸವನ್ನು ತಿಳಿಸಲು ಪ್ರಯತ್ನಿಸುತ್ತಾರೆ.

ಪೆರುವಿನ ನೆಲದ ಮಹಿಳಾ ಹೋರಾಟವನ್ನು ತಿಳಿಸುತ್ತಾರೆ ಕೇವಲ ಪರಿಸರವನ್ನು ನೋಡಿ ವರ್ಣಿಸದೆ ಅಲ್ಲಿನ ಇತಿಹಾಸವನ್ನು ಮತ್ತು ಸಂಸ್ಕೃತಿಯನ್ನು ತಿಳಿಸುತ್ತಾರೆ. “ಇಲ್ಲಿಯ ಬಡತನದ ಕಹಿ ಕಠಿಣ ಬದುಕು ಹೆಂಗಸರೂ ಬಂದೂಕು ಹಿಡಿದು ನಿಲ್ಲುವಂತೆ ಕ್ರಾಂತಿಕಾರಿ ಸಂಘಟನೆಗಳಿಗೆ ಓಗೊಡುವಂಥೆ ಮಾಡಿದೆ. ಮಹಿಳಾ ವಿಮೋಚನೆಯ ಕನಸನ್ನು ಮಾಡಿದ ಕ್ರಾಂತಿಕ್ರಾಂತಿ ಸಂಘಟನೆಗಳು ಸಾಕಷ್ಟು ಮಹಿಳೆಯರನ್ನು ಒಳಗೊಂಡಿವೆ. ಜಮಿನ್ದಾರಿ ಪದ್ಧತಿಯಲ್ಲಿ ಮಹಿಳೆಯ ಶೋಷಣೆ, ಅತ್ಯಾಚಾರ ಸಾಮಾನ್ಯವಾದ ಕಾರಣ, ಬಡ ರೈತಾಪಿ ಹೆಂಗಸರಿಗೆ ಈ ಕ್ರಾಂತಿಕಾರಿ ಸಂಘಟನೆಯ ಕರೆ ಆಕರ್ಷಕವಾಗಿ ಕಾಣುತ್ತದೆ. ಎಡಿತ್ ಲಾಗೋಸ್ ‘ಶೈನಿಗ್ ಪಾತ್’ಗೆ ಸೇರಿದ ಅಂತಹ ಓರ್ವ ಮಹಿಳೆ ೧೯೮೨ರಲ್ಲಿ ಕೇವಲ ೧೯ವರ್ಷದ ಈ ಎಳೆಯ ಗೊರಿಲ್ಲಾ ಹೋರಾಟಗಾರ್ತಿ, ಅಯಕುಚೊ ಜೇಲಿನಲ್ಲಿ ರಂದ್ರಮಾಡಲು ತನ್ನ ತಂಡದೊಂದಿಗೆ ಬಂದಿಳಿದಳು. ಈಕೆ ತನ್ನ ತಂಡದೊಡನೆ ಜೈಲಿನ ಕೈದಿಗಳಾಗಿದ್ದ ಕ್ರಾಂತಿಕಾರಿಗಳನ್ನು ಬಿಡುಗಡೆ ಮಾಡಿಸಿದ್ದಳು ಅಲ್ಲಿಯ ಅಸ್ತ್ರಶಸ್ತ್ರಗಳನ್ನೆಲ್ಲ ಕದ್ದಿದ್ದಳು, ಆದರೆ ನಂತರ ಈಕೆಯನ್ನು ಪೋಲಿಸರು ಹಿಡಿದರು. ಬಯೊನೆಟ ತಿವಿದು ಕೊಂದರು”[೫] ಈ ರೀತಿಯಾಗಿ ಮಹಿಳಾ ಹೋರಾಟಗಾರ್ತಿಯರು ಹೋರಾಡಿ ಮಡಿದಿದ್ದಾರೆ.

“ಶತಶತಮಾನಗಳ ಹಿಂದಿನ ಯಾರ ಕೈಚಳಕವೋ ಮರುಭೂಮಿಯಲಿ ಹರಡಿ ನಿಂತ ಕೋತಿ, ಹಮ್ಮಿಂಗ್‌ಬರ್ಡ್, ನಾಯಿ ಮುಂತಾದ ಚಿತ್ರಗಳು ಒಂದೊಂದಾಗಿ ನೋಡೊತ್ತಿದ್ದಂತೆ ಮೈ–ಮನಗಳಲ್ಲಿ ರೋಮಾಂಚನ, ನಿಜವೆ. ನಾಸ್ಕಾ ಚಿತ್ರಗಳ ಮೇಲೆ ನಾನು ಹಾರುತ್ತಿರುವುದು ದಿಟವೆ? ಚ್ಯಾರಿಯಟ್ ಆಫ್ ದಿ ಗಾಡ್ಸ್ ಓದಿದ್ದು ಯಾವಾಗ ಇಪ್ಪತ್ತು ವರ್ಷಗಳ ಹಿಂದೆ ಇರಬೇಕು”[೬]. ಅದೆಂತಹಾ ಅದ್ಭುತ ಚಿತ್ರಗಳು ಕೆಲವು ಚಿತ್ರಗಳು ನಾಲ್ಕು ಕಿ.ಮಿ. ದೊಡ್ಡದಿದೆ. ಗೆರೆಗಳು ಸಮಾನಂತರ ಗೆರೆಗಳು, ಕೊನಗಳು, ಸುರಳಿಗಳು, ಬೃಹತ್ ಪ್ರಾಣಿ ಪಕ್ಷಿಗಳ ಚಿತ್ರಗಳಿವೆ. ನೋಡಿದರೆ ಆಶ್ಚರ್ಯವಾಗುತ್ತದೆ.

“ಅರಿಕೀಪಾ ದಕ್ಷಿಣ ಪೆರುವಿನಲ್ಲಿರುವ ನಗರ ಒಂದು ಮಿಲಿಯ ಜನಸಂಖ್ಯೆ ‘ಎಲ್‌ಮಿಸ್ಟಿ’ ಎಂಬ ಜ್ವಾಲಾಮುಖಿಯ ಅಡಿಯಲ್ಲೆ ಇರುವ ನಗರ. ಈ ಜ್ವಾಲಾಮುಖಿ ಲಾವಾ ಉಗುಳಿ ೫೦೦ ವರ್ಷಗಳಾಗಿವೆ. ಯಾವ ಕ್ಷಣದಲ್ಲು ಮಿಸ್ಟಿ ಮತ್ತೆ ಸ್ಪೂಟಿಸಿ ಲಾವಾರಸವನ್ನು ಉಗಿದು. ಇಡೀ ನಗರವನ್ನು ಮುಚ್ಚಿಬಿಡಬಹುದು ಎಂದು ಜ್ವಾಲಾಮುಖಿಯ ತಜ್ಞರು ಹೇಳುತ್ತಾರೆ”[೭]

“ಮಾಚು ಪಿಚು ಬೆಟ್ಟವನ್ನು ಏರಿದಂತೆ ಎದುರಿನ ಬೆಟ್ಟದ ಒತ್ತೊತ್ತಾಧ ಸಾಲುಸಾಲುಗಳನ್ನು ನೋಡುತ್ತಿದಂತೆ ಈ ಇನ್ಕಾ ದೊರೆಗಳು ಈ ಕಡಿದಾದ ಬೆಟ್ಟದ ಮೇಲೆ ಪರ್ವತ ಶ್ರೇಣಿಯ ನಟ್ಟನಡುವೆ ಇಷ್ಟೆತ್ತರದಲ್ಲಿ ತಮ್ಮ ನಗರವನ್ನು ಸ್ಥಾಪಿಸಲು ಯೊಚಿಸಿದ್ದಾದರೂ ಹೇಗೆ ಎಂದು ಅಚ್ಚರಿಯಾಗಿತ್ತು. ಬಸ್ಸು ದಟ್ಟವಾದ ಕಾಡುಪೊದೆ ಮರಗಿಡಗಳ ನಡುವಿನ ಇಕ್ಕಟ್ಟು ಹಾದಿಯಲ್ಲಿ ಮೇಲೇರಿ ಮಾಚುಪಿಚು ಬಳಿ ನಿಂತಿತು”[೮]

ಮಾಚುಪಿಚು ದಕ್ಷಿಣ ಅಮೇರಿಕದ ಅತ್ಯಂತ ರಮಣೀಯ ಪ್ರವಾಸ ತಾಣ ಆಂಡಿಯನ್ ಸಂಸ್ಕೃತಿಯ ಉತ್ಕೃಷ್ಟ ಸಂಕೇತವಿದು. ಪುರಾತನ ಪೆರುವಗರು ಏರು ಎತ್ತರದಲ್ಲಿ ಸುತ್ತಲಿನ ಪ್ರಕೃತಿಯೊಡನೆ ಲೀನವಾಗುವಂತೆ ಕಟ್ಟಿದ ಅಧ್ಯಾತ್ಮನಗರಿ. ಮಾಚುಪಿಚುವನ್ನು ಹದಿನಾಲ್ಕನೇ ಶಥನಮಾನದಲ್ಲಿ ಇನ್ಕಾಗಳು ಕಟ್ಟಿದರು.

ನಮ್ಮ ಜನರಂತೆ ಆದರಿಸುವ ಪ್ರೀತಿಸುವ, ಸ್ನೇಹಭಾವ ತೋರಿಸುವ ಜನರನ್ನು ಭೇಟಿಮಾಡಿದ ಅನುಭವಗಳನ್ನು ಲೇಖಕಿ ಸ್ವಾರಸ್ಯಕರವಾಗಿ ವರ್ಣಿಸಿದ್ದಾರೆ. ಕನಸಗಾರ್ತಿ ಗೆಳತಿಯ ಜೊತೆಗೂಡಿ ಬೆಟ್ಟವೇರಿ ಕಣಿವೆ ಇಳಿದು ಅಮೇಜಾನ್ ನದಿಯಲ್ಲಿ ರಾತ್ರಿ ದೋಣಿ ಪಯಣ ಮಾಡಿದ ರೊಮಾಂಚಕ ಸನ್ನಿವೇಶಗಳನ್ನು ಮಹಿಳೆಯರ ಅಪೂರ್ವ ಸಾಧನೆಯನ್ನು ದಾಖಲಿಸುವ ಅತ್ಯುತ್ತಮ ಕೃತಿಯಾಗಿದೆ.

**ಅಡಿಟಿಪ್ಪಣಿ**

೧. ನೇಮಿಚಂದ್ರ : ಪೆರುವಿನ ಪವಿತ್ರ ಕಣಿವೆಯಲ್ಲಿ. ಪು – ೭

೨. ನೇಮಿಚಂದ್ರ : ಪೆರುವಿನ ಪವಿತ್ರ ಕಣಿವೆಯಲ್ಲಿ. ಪು – ೧೬

೩. ನೇಮಿಚಂದ್ರ : ಪೆರುವಿನ ಪವಿತ್ರ ಕಣಿವೆಯಲ್ಲಿ. ಪು – ೨೦

೪. ನೇಮಿಚಂದ್ರ : ಪೆರುವಿನ ಪವಿತ್ರ ಕಣಿವೆಯಲ್ಲಿ. ಪು – ೨೯

೫. ನೇಮಿಚಂದ್ರ : ಪೆರುವಿನ ಪವಿತ್ರ ಕಣಿವೆಯಲ್ಲಿ. ಪು – ೩೭

೬. ನೇಮಿಚಂದ್ರ : ಪೆರುವಿನ ಪವಿತ್ರ ಕಣಿವೆಯಲ್ಲಿ. ಪು – ೬೬

**Golden Resrach Thoughts**
**Vol -3 , ISSUE –V, Jan - 2014**
**ISSN No-2031-5063** Available online at www.aygrt.isrj.org

೭. ನೇಮಿಚಂದ್ರ : ಪೆರುವಿನ ಪವಿತ್ರ ಕಣಿವೆಯಲ್ಲಿ. ಪು – ೭೭
೮. ನೇಮಿಚಂದ್ರ : ಪೆರುವಿನ ಪವಿತ್ರ ಕಣಿವೆಯಲ್ಲಿ. ಪು – ೧೨೮–೧೨೯



**ಶಿವಗಂಗಾ U. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**